# ಮರದಲ್ಲಿ ಚಿತ್ತಾರ





■ ದೇಬಬ್ರತ ಬ್ಯಾನರ್ಜಿ

ಚಿತ್ರ: ದಿಲೀಪ್ ಬ್ಯಾನರ್ಜಿ

ನಾಗರಿಕತೆಯ ಆರಂಭ ಘಟ್ಟದಿಂದಲೂ ಮರದ ಜತೆಗೆ ಮನುಷ್ಯನದ್ದು ಅವಿನಾಭಾವ ಸಂಬಂಧ. ಮರದ ಕೆತ್ತನೆ ಕೆಲಸಗಳಂತೂ ಮಾನವನ ಸೃಜನಶೀಲತೆಯ ಗುಣವನ್ನು ಕಾಲಕಾಲಕ್ಕೆ ಒರೆಗೆ ಹಚ್ಚಿದೆ. ಬೆಂಕಿ ಉರಿಸುವುದರಿಂದ ಹಿಡಿದು, ಮನೆ ಕಟ್ಟಲು, ಆಯುಧ ತಯಾರಿಸಲು, ಕೃಷಿ ಉಪಕರಣಗಳನ್ನು ತಯಾರಿಸಲು– ಹೀಗೆ ಮರದ ಉಪಯೋಗಗಳನ್ನು ಮನುಷ್ಯ ನೂರೆಂಟು ನಮೂನೆಯಲ್ಲಿ ಮಾಡಿಕೊಂಡು ಬಂದಿದ್ದಾನೆ. ದೇವ– ದೇವತೆಗಳ ಮೂರ್ತಿ ಕೆತ್ತಲೂ, ಬೊಂಬೆಗಳನ್ನು ನಿರ್ಮಿಸಲೂ ಮರದ ಬಳಕೆಯಾಗಿದೆ. ಬುಡಕಟ್ಟು ಜನಾಂಗದಲ್ಲೂ, ಆ ಬಳಿಕ ಆಧುನಿಕ ಮಾನವರಲ್ಲೂ ಮರದ ಕೆತ್ತನೆ ಜನಪ್ರಿಯ ಹವ್ಯಾಸವಾಗಿ ಬೆಳೆದಿದೆ.

(8ನೇ ಪುಟ ನೋಡಿ)